ಶ್ರಿ ಎಸ್.ಎಂ ಕೃಷ್ಣ:- ಇವತ್ತು ಏನು ಈ 120 ಮುನಿಸಿಪಾಲಿಟಿಗಳು ಇವೆ, ಅದರಲ್ಲಿ 80 ಮುನಿಸಿಪಾಲಿಟಿಗಳು ಈಗಾಗಲೇ ಈ ಹೊಸ ಚೌಕಟ್ಟಿನಲ್ಲಿ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ, ಇನ್ನು ಕೆಲವೊಂದಕ್ಕೆ ಹೈಕೋರ್ಟಿನಲ್ಲಿ ಸ್ಟೇ ಆಗಿ ನಿಂತಿವೆ.

ಅಧ್ಯಕ್ಷರು:- ಮಾನ್ಯ ವೈ.ಕೆ.ರಾಮಯ್ಯನವರೆ, ತಾವು, ಏಕೆ ಎದ್ದು ನಿಂತಿದ್ದೀರಿ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಿದ್ದಾರೆ. You please come to your seat.

ಶ್ರೀ ಎಸ್.ಎಂ.ಕೃಷ್ಣ- ಸಾಮಾನ್ಯವಾಗಿ ಅಧ್ಯಕ್ಷರಿಗೆ ಬೆನ್ನು ತೋರಿಸಿ ಎದ್ದು ನಿಲ್ಲಬಾರದು. ಅದೊಂದು ಕನ್‌ವೆನ್‌ಷನ್ ನಮ್ಮದು. ಮಾರ್ಚ್ 31ನೇ ತಾರೀಖಿನವರೆಗೆ ಈ ಸದನ ನಡೆಯಬೇಕು ಎಂದು ತಾವು BAC ಯಲ್ಲಿ ತೀರ್ಮಾನವನ್ನು ಮಾಡಿದ್ದೀರಿ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಏನು ಹೇಳಿದ್ದೀರಿ ಅದನ್ನು ನಾನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ. ಅವರು ನಾಳೆ ಅಥವಾ ನಾಡಿದ್ದು ತಮಗೆ ಸ್ಪಂದಿಸುತ್ತಾರೆ. ಇದೊಂದು ಮುಖ್ಯವಾದಂಥ ವಿಚಾರ ಎನ್ನುವುದರಲ್ಲಿ ಎರಡು ಮಾತಿಲ್ಲ. ಅದನ್ನು ನಾವು ಒಪ್ಪುತ್ತೇವೆ.

ಈ) ರಾಜ್ಯದ ತಂಬಾಕು ಬೆಳೆಗಾರರ ಸಮಸ್ಯೆ

ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ):- ಮಾನ್ಯ ಅಧ್ಯಕ್ಷರೆ, ರಾಜ್ಯದ ತಂಬಾಕು ಬೆಳೆಗಾರರು ಸಂಕಷ್ಟದಲ್ಲಿರುವುದರಿಂದ ಆ ವಿಷಯದಲ್ಲಿ ತಮಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ನಾನು ಕಳುಹಿಸಿಕೊಟ್ಟಿದ್ದೆ. ಅದಕ್ಕೆ ಸಂಬಂಧಪಟ್ಟ ಸಚಿವರು ಉತ್ತರವನ್ನು ಕಳುಹಿಸಿ ಕೊಟ್ಟಿದ್ದರೆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಇದು ಗಮನ ಸೆಳೆಯುವ ಸೂಚನೆಯಲ್ಲ, ಈಗ ಇರುವುದು ಶೂನ್ಯವೇಳೆ, ಅದರಲ್ಲಿ ಏನಾದರೂ ಹೇಳುವುದಿದ್ದರೆ ಹೇಳಿ, ಆ ಸಮಯದಲ್ಲಿ ನಿಮ್ಮ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಎ. ಮಂಜು(ಅರಕಲಗೂಡು):- ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಟೊಬ್ಯಾಕೋ ರಿಜಿಸ್ಟ್ರೇಷನ್ ಸ್ಟಾರ್ಟ್ ಆಗಿರುವುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿಲ್ಲವೆನ್ನುವುದರ ಬಗ್ಗೆ ನಾನು ಗಮನ ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ. ಜೊತೆಗೆ ಏನೆಂದರೆ, ನಮ್ಮ ರಾಜ್ಯದಲ್ಲಿ ಹೊಗೆಸೊಪ್ಪನ್ನು ಬೆಳೆಯತಕ್ಕ 49 ಸಾವಿರ ಜನ ರೈತರು ಇದ್ದರೂ ಕೂಡ ಟೊಬ್ಯಾಕೋ ಬೋರ್ಡಿನವರು ನಮ್ಮ ರಾಜ್ಯದ 19 ಸಾವಿರ ಜನ ರೈತರಿಗೆ ಮಾತ್ರ ರಿಜಿಸ್ಟರ್ಡ್ ಗ್ರೋಯರ್ಸ್ ಎಂದು ಕೊಟ್ಟಿರುವುದು, 20 ಸಾವಿರ ಜನ ರೈತರಿಗೆ ಅನ್‌ರಿಜಿಸ್ಟರ್ಡ್ ಗ್ರೋಯರ್ಸ್ ಕೊಟ್ಟು 15 ಪರ್ಸೆಂಟ್ ಹಣವನ್ನು ಟೊಬ್ಯಾಕೋ ಬೋರ್ಡಿನವರು ವಸೂಲ್ಮಾಡುತ್ತಿರುವುದರಿಂದ ನಮ್ಮ ರೈತರಿಗೆ ಸುಮಾರು 11 ಕೋಟಿ ರೂಪಾಯಿಗಳಷ್ಟು ನಷ್ಟವಾಗಿರುವುದು ಕಂಡುಬಂದಿರುತ್ತದೆ. ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಟೊಬ್ಯಾಕೋ ಬೋರ್ಡಿನವರ ಜೊತೆ ಸಂಪರ್ಕಿಸಿ ಇದರ ಬಗ್ಗೆ ಸೂಕ್ತವಾದ ಸಲಹೆಯನ್ನು ಕೊಡಬೇಕು, ನಮ್ಮಲ್ಲಿ ರಿಜಿಸ್ಟರ್ಡ್ ಗ್ರೋಯರ್ಸ್ ಮತ್ತು ಅನ್‌ರಿಜಿಸ್ಟರ್ಡ್ ಗ್ರೋಯರ್ಸ್ ಎನ್ನುವುದನ್ನು ಬದಲಾವಣೆ ಮಾಡಿ, ಎಲ್ಲಾ ರೈತರನ್ನು ರಿಜಿಸ್ಟರ್ಡ್ ಗ್ರೋಯರ್ಸ್ ಎಂದು ಮಾಡಿ ರೈತರ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.